ಶ್ರೀ ಬಿ. ಎನ್. ಬಚ್ಚೇಗೌಡ.— ಆದಷ್ಟು ಬೇಗ ವಶಪಡಿಸಿಕೊಂಡಿರತಕ್ಕಂಥ ಆಗತ್ಯ ವಸ್ತುಗಳನ್ನು ವಿತರಣೆ ಮಾಡುವುದಕ್ಕೋಸ್ಕರ ಜಿಲ್ಲಾಧಿಕಾರಿಗಳಿಗೆ ಆಗಲಿ ಅಥವಾ ಅಸಿಸ್ಟೆಂಟ್ ಕಮೀಶನರ್‌ಗೆ ಆಗಲಿ, ಆದೇಶವನ್ನು ಕೊಡಬೇಕು ವಿತಕ್ಕೆಂದರೆ ಸುಮಾರು ಎರಡು-ಮೂರು ವರ್ಷಗಳ ಕಾಲ ಆಹಾರಧಾನ್ಯಗಳು ಹಾಗೆಯೇ ಇರುವಂತಹ ಪರಿಸ್ಥಿತಿಯನ್ನು ಕಂಡಿದ್ದೇವೆ. ಇದರ ಬಗ್ಗೆ ವ್ಯವಸ್ಥೆ ಯನ್ನು ತಾವು ಮಾಡುತ್ತೀರಾ ?

ಶ್ರೀ ಜೆ. ಬಸವಣ್ಣಪ್ಪ.— ಎರಡು-ಮೂರು ವರ್ಷಗಳ ಕಾಲ ಆಹಾರಧಾನ್ಯಗಳನ್ನು ಗೋಡೌನ್ ಗಳಲ್ಲಿ ಇಡುವುದಕ್ಕೆ ಬಿಡುವುದಿಲ್ಲ. ಪ್ರತಿಯೊಂದು ಆಹಾರಧಾನ್ಯಕ್ಕೂ ಇಟ್ಟುಕೊಳ್ಳುವುದಕ್ಕೆ ಲಿಮಿಟ್ ಇದೆ. ಭತ್ತ, ರಾಗಿ, ಜೋಳ ಯಾವುದೇ ಆಗಬಹುದು. ಎಷ್ಟು ಕಾಲ ಇಟ್ಟುಕೊಳ್ಳಬಹುದು ಎಂದಿದೆ. ಇದಕ್ಕೆ ಅನುಗುಣವಾಗಿ ವಿತರಣೆ ಮಾಡಂತ್ತೇವೆ. ಮಾನ್ಯ ಸದಸ್ಯರು ಒಂದು ಕೇಸ್‌ನಲ್ಲಿ ಪ್ರತ್ಯಕ್ಷವಾಗಿ ನೋಡಿ ಹೇಳಿದ್ದಾರೆ. ಆದರೆ ಈಗಾಗಲೇ ಇದನ್ನು ನಾವು ಡಿಸ್‌ಫೋಸ್ ಮಾಡಿದ್ದೇವೆ.

ಔರಾದ್ ತಾಲ್ಲೂಕಿನಲ್ಲಿರುವ ಸರಕಾರಿ ಆಸ್ಪತ್ರೆಗಳು.

೧೫೫೯. ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಔರಾದ್ ತಾಲ್ಲೂಕಿನಲ್ಲಿ ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ ಎಷ್ಟು ಹಾಗೂ ಅವುಗಳಲ್ಲಿ ಸರ್ಕಾರಿ ಕಟ್ಟಡಗಳಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು ?

ಆ) ಅವುಗಳ ಪೈಕಿ ವೈದ್ಯರು ಹಾಗೂ ಮಹಿಳಾ ವೈದ್ಯರಿಲ್ಲದ ಆಸ್ಪತ್ರೆಗಳ ಸಂಖ್ಯೆ ಎಷ್ಟು ?

ಇ) ಈ ಆಸ್ಪತ್ರೆಗಳಿಗೆ ಔಷಧಿಗಳು ಸರಿಯಾಗಿ ವಿತರಣೆಯಾಗುತ್ತಿದೆಯೇ ? ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಡಾ. ಹೆಚ್. ಎಲ್. ತಿಮ್ಮೇಗೌಡ.— (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

೨) ೧೧

೬

ಆ) ವೈದ್ಯರಿಲ್ಲದ್ದು — ೧ ಆರೋಗ್ಯ ಘಟಕ (ಹೋಳ ಸಮುದ್ರ) ಮಹಿಳಾ ವೈದ್ಯರಿಲ್ಲದ್ದು:

೧) ಸಾರ್ವಜನಿಕ ಆಸ್ಪತ್ರೆ — ೧

೨) ಪ್ರಾಥಮಿಕ ಆರೋಗ್ಯ ಕೇಂದ್ರಗಳು ೨

೩) ಹೌದು, ಉದ್ಭವಿಸುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮಂತ್ರಿಗಳು (ಅ) ಪ್ರಶ್ನೆಗೆ 'ಒಂದು' ಎಂದು ಹೇಳಿದ್ದಾರೆ. ಆದರೆ ಬಡಗಾಂವಿಯಲ್ಲಿ ವೈದ್ಯರೇ ಇಲ್ಲ. ಅಲ್ಲಿ ಮಹಿಳಾ ವೈದ್ಯರು ಎಷ್ಟು ವರ್ಷಗಳಿಂದ ಇದ್ದಾರೆ ಎಂದು ತಿಳಿಸುತ್ತೀರಾ ? ಮತ್ತು ಇದರ ಬಗ್ಗೆ ಯಾವಾಗ ಹುದ್ದೆಗಳನ್ನು ಭರ್ತಿ ಮಾಡುತ್ತೀರೆಂದು ನಾನು ತಮ್ಮ ಮುಂಖಾಂತರ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಡಿ. ಬಿ. ಇನಾಂದಾರ್(ಆರೋಗ್ಯ ಮತ್ತು ಸಮಾಜ ಕಲ್ಯಾಣ ರಾಜ್ಯ ಸಚಿವರು).—ಅಧ್ಯಕ್ಷರೇ, ಈಗ ಸುಮಾರು ೧೧೦ ಜನ ಮಹಿಳಾ ವೈದ್ಯರನ್ನು ಭರ್ತಿ ಮಾಡಿಕೊಂಡಿದ್ದು, ಇನ್ನೂ ನಾಲ್ಕು ಜನ ವೈದ್ಯರಿಗೆ ನೇಮಕಾತಿ ಆಜ್ಞೆಗಳನ್ನು ಕಳಿಸಿಕೊಡುತ್ತಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ.—ಔಷಧಿಗಳ ಬಗ್ಗೆ ತಾವು 'ಹೌದು' ಎಂದು ಹೇಳಿದ್ದೀರಿ. ಕೆಲವು ಆಸ್ಪತ್ರೆಗಳಲ್ಲಿ ಔಷಧಿಗಳೇ ಇಲ್ಲದಿರುವಂತಹ ಪರಿಸ್ಥಿತಿ ಇದೆ. ಆದ್ದರಿಂದ ಯಾವ್ಯಾವ ಆಸ್ಪತ್ರೆಗಳಲ್ಲಿ ಎಷ್ಟೆಷ್ಟು ಔಷಧಿಗಳನ್ನು ಕೊಡಲು ಕ್ರಮ ತೆಗೆದುಕೊಂಡಿದ್ದೀರಿ, ಎಂದು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಡಿ. ಬಿ. ಇನಾಂದಾರ್.—ಈ ವರ್ಷ ಔರಾದ್‌ನ ಸಾರ್ವಜನಿಕ ಆಸ್ಪತ್ರೆಗೆಲ್ಲಿ ರೂ. ೧೨೯ ೭೪–೮೯, ಸರಬರಾಜು ಮಾಡಲಾಗಿದೆ ಪ್ರಾಥಮಿಕ ಆರೋಗ್ಯ ಕೇಂದ್ರ ಶಾಂತಾಪುರ ಆಸ್ಪತ್ರೆಯಿಂದ ಇಂಡೆಂಟ್ ಬಂದಿಲ್ಲ. ಕಮಲಾ ನಗರದ್ದು ರೂ. ೨೩ ೫೬೭–೨೪. ಮಂಧೋಳ್ ರೂ. ೯,೨೩೩–೮೪, ಪ್ರಾಥಮಿಕ ಆರೋಗ್ಯ ಕೇಂದ್ರಹೋರಿಸವಂದ್ರ ರೂ. ೯೨೩೩–೮೪, ಪ್ರಾಥಮಿಕ ಆರೋಗ್ಯ ಘಟಕ ಡಾಂಗಾಸ್ ರೂ. ೯೨೩೩–೮೪,ಪ್ರಾಥಮಿಕ ಆರೋಗ್ಯ ಘಟಕ ವಡಗಾಂವ ಇಲ್ಲಿ ಸರಬರಾಜು ಆಗಿಲ್ಲ. ಸಧ್ಯದಲ್ಲೇ ಆಗುವ ಸಿದ್ಧತೆಇರುತ್ತದೆ. ತಾನಾ ಕುಶನೂರು ಪ್ರಾಥಮಿಂಕ ಆರೋಗ್ಯ ಘಟಕಕ್ಕೆ ರೂ. ೯೨೩೩–೮೪, ಚಿಟಕಿ ರೂ.೯೨೩೩–೮೪. ಜೋರಡಾನಿ ೯೨೩೩–೮೪, ಮತ್ತು ತೋರಾನಾ ರೂ ೯೩೨೨–೮೪.

ಪ್ರಶ್ನೆ ೧೨೪೮ – ಮಾನ್ಯ ಸದಸ್ಯರು (ಶ್ರೀ ಕೆ. ವಿ. ರವೀಂದ್ರನಾಥಬಾಬು) ಹಾಜರಿರಲಿಲ್ಲ.

ಪ್ರಶ್ನೆ ೧೦೯೭ – ಮಾನ್ಯ ಸದಸ್ಯರಾದ ಶ್ರೀ ಸಿ. ಕಣ್ಣನ್ ಹಾಜರಿಲ್ಲ.

ಪ್ರಶ್ನೆ ೧೦೭೮ – ಮಾನ್ಯ ಸದಸ್ಯರಾದ ಶ್ರೀ ಮಹಮದ್ ಒಮರ್ ಹಾಜರಿಲ್ಲ.

ಪ್ರಶ್ನೆ ೧೩೬೧ – ಮಾನ್ಯ ಸದಸ್ಯರಾದ ಶ್ರೀ ಡಿ. ಟಿ. ಜಯಕುಮಾರ್ ಹಾಜರಿಲ್ಲ.

ಪ್ರಶ್ನೆ ೧೨೭೨ – ಮಾನ್ಯ ಸದಸ್ಯರಾದ ಶ್ರೀ ಪಂಪಾವತಿ ಹಾಜರಿಲ್ಲ.

ಪ್ರಶ್ನೆ ೫೭೮ - ಮಾನ್ಯ ಸದಸ್ಯರಾದ ಶ್ರೀ ಆರ್. ಎನ್. ನಾಯಕ್ ಹಾಜರಿಲ್ಲ.

ಪ್ರಶ್ನೆ ಸಂಖ್ಯೆ ೫೬೯

ಶ್ರೀ ಕೆ. ಬಿ. ಕೋಳಿವಾಡ.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೇ ಉಪಪ್ರಶ್ನೆ ಎಂದರೆ, ಈ ವರ್ಷದ ಬಜೆಟ್ಟಿನಲಿ ಎಷ್ಟು ಮೊತ್ತ ಕಾದಿರಿಸಿದ್ದೀರಿ ? ಮತ್ತು ಹೋದವರ್ಷ ಬಜೆಟ್ಟಿನಲ್ಲಿ ಬಂದಂಥ ಕಾರ್ಯಕ್ರಮ ಒಂದು ವರ್ಷ ಗತಿಸಿದರೂ ಸಹಿತ ಆಡಳಿತಾತ್ಮಕ ಮಂಜೂರಾತಿ ದೊರಕಲು ತಡವಾಗಿಲ್ಲವೇ ? ಇದಕ್ಕೆ ಯಾರು ಜವಾಬ್ದಾರರು ? ಕಟ್ಟಡವನ್ನು ಪೂರ್ತಿ ಮಾಡಲಿಕ್ಕೆ ಬಹಳ ದಿವಸ ಬೇಕಾಗುತ್ತದೆ. ಅಲ್ಲಿಯಂವರೆಗೆ ನಗರಸಭೆಯವರೇ ತಾತ್ಕಾಲಿಕವಾಗಿ ನಡೆಸಲಿಕ್ಕೆ ವ್ಯವಸ್ಥೆ ಮಾಡಿಕೊಟ್ಟರೆ, ಸಿಬ್ಬಂದಿವರ್ಗದವರನ್ನು ತಾವು ಮಂಜೂರು ಮಾಡುತ್ತೀರಾ ?

ಶ್ರೀ ಡಿ. ಬಿ. ಇನಾಂದಾರ್.—ಒಂದುವೇಳೆ ನಗರಸಭೆಯವರು ವ್ಯವಸ್ಥೆ ಮಾಡಿಕೊಟ್ಟರೆ ಇದರ ಬಗ್ಗೆ ಪರಿಶೀಲನೆ ಮಾಡಲಾಗುವುದು. ಆದೂ ಅಲ್ಲದೆ, ಸುಮಾರು ೧೨ ಲಕ್ಷ, ೮೦ ಸಾವಿರ ವೆಚ್ಚದಲ್ಲಿ ಮೊದಲನೇ ಹಂತದಲ್ಲಿ ಯೋಜನೆಯನ್ನು ಕೈಗೊಂಡಿದೆ. ೪ ಲಕ್ಷ ರೂಪಾಯಿಗಳನ್ನು ಈ ವರ್ಷದ ಬಜೆಟ್ಟಿನಲ್ಲಿ ಇಟ್ಟಿದೆ, ತೀವ್ರಗತಿಯಲ್ಲಿ ಆಡಳಿತಾತ್ಮಕ ಮಂಜೂರಾತಿ ಕೊಟ್ಟು ಇದನ್ನು ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಆರಕ್ಷಕ ವಲಯಗಳು.

೧೫೦೦ ಶ್ರೀ ಬಿ. ಜೆ. ಜಮಖಂಡಿ(ಮಂಧೋಳ್).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿ ೧೯೪೪–೮೫ ರಲ್ಲಿ ಎಷ್ಟು ಪೋಲೀಸ್ ವಲಯ ಹಾಗೂ ಉಪವಲಯಗಳನ್ನು ಮಂಜೂರು ಮಾಡಲಾಗಿತ್ತು ?

ಆ) ವಿಜಾಪುರ ಜಿಲ್ಲೆಯಲ್ಲಿ ಎಷ್ಟು ವಲಯಂಗಳಿಗೆ ಮಂಜೂರು ಮಾಡಲಾಗಿದೆ

ಇ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು ?